೨. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ೧೫೦ ರೂ. ಗಳಂತೆ ಭೋಜನ ವೆಚ್ಚ ವಸತಿ ಸೌಕರ್ಯ, ಬಾಡಿಗೆ, ನೀರು ವಿದ್ಯುತ್ ಮತ್ತು ಇತರೆ ವೆಚ್ಚವನ್ನು ಭರಿಸಲಾಗುತ್ತಿದೆ.

ಈಗ ಕೊಡುತ್ತಿರುವ ಭೋಜನ ವೆಚ್ಚವನ್ನು ಏರಿಸಲು ಕೆಲವು ಅನಕದಾನಿತ ಸಂಸ್ಥೆಗಳಿಂದ ಬೇಡಿಕೆಗಳು ಬಂದಿವೆ. ಇವುಗಳನ್ನು ಪರಿಶೀಲಿಸಿ ಏರಿಕೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅಂಗವಿಕಲರ ವಿಧವೆಯರ ಹಾಗೂ ವೃದ್ಧರ ಮಾಸಿಕ ವೇತನದ ಬಗ್ಗೆ

೧೬೬. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬ರ ವರೆವಿಗೆ ಸರ್ಕಾರದವರು ರಾಜ್ಯದಲ್ಲಿ ಎಷ್ಟು ಮಂದಿ ಅಂಗವಿಕಲರಿಗೆ ವಿಧವೆಯರಿಗೆ ಹಾಗೂ ವೃದ್ಧರಿಗೆ ಮಾಸಿಕ ವೇತನವನ್ನು ನೀಡುತ್ತಿದ್ದಾರೆ ವಿಧವೆಯರಿಗೆ ಹಾಗೂ ಗರ್ಭಿಣಿಯರಿಗೆ ಭತ್ಯ ಕೊಡುವ ಪದ್ಧತಿ ಯಾವಾಗ ಜಾರಿಗೆ ಬಂದಿತು,

ಆ) ಈ ಮಾಸಿಕ ವೇತನ ನೀಡಲು ಸರ್ಕಾರದವರು ಅನುಸರಿಸುತ್ತಿರುವ ರೀತಿ ನೀತಿಗಳೇನು,

ಇ) ವೃದ್ಧರಲ್ಲದ ಅನೇಕ ಮಂದಿಗೆ ಈ ಮಾಸಾಶನವು ದೊರಕುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗೂ ಸರ್ಕಾರದವರು ಇದರ ಬಗ್ಗೆ ಜಿಲ್ಲಾವಾರು ಸಮೀಕ್ಷೆ ನಡೆಸಿ ಅಂತಹವರಿಗೆ ವೇತನ ನಿಲ್ಲಿಸಲು ಕ್ರಮ ಕೈಗೊಳ್ಳುವರೆ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ವೇತನಗಳ ಸಂಖ್ಯೆ

ಅ)	೧.	ವೃದ್ಧಾಪ್ಯ ವೇತನಿಗಳು	೬,೫೪,೫೬೦
	೨.	ಅಂಗವಿಕಲರ ಮಾಸಾಶನಿಗಳು	೨,೭೫,೧೬೮
	೩.	ವಿಧವಾ ಮಾಸಾಶನಿಗಳು	೪,೬೭,೦೮೫

ವಿಧವಾ ಮಾಸಾಶನ ಪದ್ಧತಿ ಹಾಗೂ ಹೆರಿಗೆ ಭತ್ಯ ಪದ್ಧತಿಯು ೧-೪-೧೯೮೪ ರಿಂದ ಜಾರಿಗೆ ಬಂದಿರುತ್ತದೆ.

ಆ) ಸರ್ಕಾರದವರು ಅನುಸರಿಸುತ್ತಿರುವ ರೀತಿನೀತಿಗಳು

೧. ವೃದ್ಧಾಪ್ಯ ವೇತನ :

೧. ವೇತನಿಗೆ ೬೫ ವರ್ಷ ಅಥವಾ ಹೆಚ್ಚಿಗೆ ಆಗಿರಬೇಕು.
೨. ಅವರಿಗೆ ಯಾವುದೇ ವಿಧವಾದ ಆರ್ಥಿಕ ವರಮಾನ ಇರಬಾರದು.
೩. ಅವರು ಕರ್ನಾಟಕ ರಾಜ್ಯದಲ್ಲಿ ೩ ವರ್ಷಗಳ ಕಾಲವಾದರೂ ನೆಲೆಸಿರುವವರಾಗಿಬೇಕು.
೪. ಜೀವಂತ ಅವಧಿಯವರೆಗೆ ವೃದ್ಧಾಪ್ಯ ವೇತನವನ್ನು ಪಾವತಿ ಮಾಡಲಾಗುತ್ತದೆ.

೨. ಅಂಗವಿಕಲರ ಮಾಸಾಶನ :

೧. ಮಾಸಾಶನಿಯು ಅಂಗವಿಕಲನಾಗಿರಬೇಕು.
೨. ಅವರಿಗೆ ಯಾವುದೇ ಆರ್ಥಿಕ ವರಮಾನವಿರಬಾರದು.
೩. ಕುಟುಂಬದ ವಾರ್ಷಿಕ ಆರ್ಥಿಕ ವರಮಾನವು ೩,೬೦೦ರೂ. ಗಳಿಗೆ ಮೀರಿರಬಾರದು.
೪. ಮರಣಿಸುವವರೆಗೆ ಆರ್ಥಿಕ ಸ್ಥಿತಿ ಸುಧಾರಿಸುವವರೆಗೆ ಅಥವಾ ಕರ್ನಾಟಕ ರಾಜ್ಯವನ್ನು ಬಿಡುವವರೆವಿಗೆ ಮಾಸಾಶನವನ್ನು ನೀಡಲಾಗುತ್ತದೆ.

೩. ವಿಧವಾ ಮಾಸಾಶನ :

೧. ವಿಧವೆಯಾಗಿರಬೇಕು.

೨. ೧೮ ವರ್ಷಕ್ಕೂ ಮೇಲ್ಪಟ್ಟು ವಯಸ್ಕಳಾಗಿರಬೇಕು.

೩. ವಾರ್ಷಿಕ ಆದಾಯ ೧೫೦೦ ರೂ. ಗಳಿಗೆ ಮೀರಿರಬಾರದು.

೪. ಈ ಮಾಸಾಶನವನ್ನು ವ್ಯಾತರಾಗುವವರೆವಿಗೆ ಅಥವಾ ಪುನರ್ ವಿವಾಹವಾಗುವ ತರೆವಿಗೆ ಪಾವತಿ ಮಾಡಲಾಗುತ್ತದೆ.

೪) ಜಿಲ್ಲಾವಾರು ಸಮೀಕ್ಷೆ ನಡೆಸಲು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಆದೇಶ ನೀಡ ಲಾಗಿದೆ. ಕಾನೂನಿಗೆ ಅನುಗುಣವಾಗಿಲ್ಲದ ಮಾಸಾಶನಿಗಳು ಕಂಡುಬಂದಲ್ಲಿ ಅಂತಹವರ ವೇತನ ನಿಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಸರ್ಕಾರದಿಂದ ನಡೆಸಲ್ಪಡುವ ಹರಿಜನ-ಗಿರಿಜನ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಬಗ್ಗೆ

೮೭೮ (೫). ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೮) ರಾಜ್ಯದಲ್ಲಿ ಸರಕಾರದಿಂದ ನಡೆಸಲ್ಪಡುವ ಹರಿಜನ-ಗಿರಿಜನ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ಸರ್ಕಾರದಿಂದ ಕೊಡುತ್ತಿರುವ ಹಣ ಸಾಕಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೮) ಸದರಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಕೊಡಲ್ಪಡುವ ಯಾವುದೇ ಸವಲತ್ತುಗಳು ವಿದ್ಯಾರ್ಥಿಗಳಿಗೆ ದೊರೆಯದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೩) ಸದರಿ ತೊಂದರೆಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು,

೪) ರಾಜ್ಯದಲ್ಲಿರುವ ಇನ್ನೂ ಹೆಚ್ಚಿನ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹೆಚ್ಚು ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗುವುದೇ ?

ಶ್ರೀ ಜಿ. ಬಸವಣೆಪ್ಪ (ಸಮಾಜ ಕಲ್ಯಾಣ ಸಚಿವರು).—

೮) ಬಂದಿದೆ.

೮) ಈ ಬಗ್ಗೆ ದೂರುಗಳಿಲ್ಲ.

೩) ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ಕಟ್ಟಲು ಆದಷ್ಟು ಕ್ರಮ ಕೈಗೊಳ್ಳಲಾಗು ತ್ತಿದೆ. ಈ ಸಾಲಿನಲ್ಲಿ ೧೦೦ ಕಟ್ಟಡಗಳನ್ನು ಪರಿಶಿಷ್ಟ ಜಾತಿಯವರಿಗಾಗಿ ಕಟ್ಟಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ೫೩ ಕಟ್ಟಡಗಳನ್ನು ಕಟ್ಟಲು ಎನ್.ಆರ್.ಇ.ಪಿ. ಮತ್ತು ಜಿಲ್ಲಾ ಉಪಯೋಜನೆ ಗಳಲ್ಲಿ ಜಿಲ್ಲಾಧಿಕಾರಿಗಳು ಕ್ರಮ ಕೈಗೊಂಡಿರುತ್ತಾರೆ. ವಿದ್ಯಾರ್ಥಿನಿಲಯಗಳನ್ನು ವ್ಯವಸ್ಥಿತವಾಗಿ ನಡೆಸಿ ಕೊಂಡು ಹೋಗಲು ಜಿಲ್ಲಾಧಿಕಾರಿಗಳು ಹಾಗೂ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ತನಿಖೆ ನಡೆಸಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳುವರು.

೪) ಆಯವ್ಯಯದಲ್ಲಿ ಭರಿಸಲಾದ ಹಣವನ್ನು ಅವಲಂಬಿಸಿ ಹಂತ ಹಂತವಾಗಿ ನಿಲಯಗಳನ್ನು ತೆರೆಯಲು ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು.